# ಶ್ರೀಮಾತೆಯವರ ಚರಣತಲದಲ್ಲಿ

ಬಂಗಾಳಿ ಮೂಲ: **ಪ್ರವ್ರಾಜಿಕಾ ಭಾರತೀಪ್ರಾಣಾ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೨

**ನಾ**ನು ಶ್ರೀಮಾತೆಯವರಿಗೆ ಹಾಲು ಕುಡಿಸುತ್ತಿದ್ದೆ, ಥರ್ಮೋಮೀಟರನ್ನೂ ಇಟ್ಟು ನೋಡುತ್ತಿದ್ದೆ. ಅವರು ನಡು ನಡುವೆ ಏನೇ ಮಾಡಿದರೂ ಹಾಲು ಕುಡಿಯುತ್ತಿರಲಿಲ್ಲ. ನಾನು, ''ಹಾಗಿದ್ದರೆ ಮಹಾರಾಜರನ್ನು ಕರೆಯುತ್ತೇನೆ'' ಎನ್ನುತ್ತಿದ್ದಂತೆಯೇ, ಅವರು ಚಿಕ್ಕಮಕ್ಕಳ ಹಾಗೆ ಸದ್ದಿಲ್ಲದೆ ಹಾಲು ಕುಡಿದುಬಿಡುತ್ತಿದ್ದರು. ರಾತ್ರಿ ಹನ್ನೊಂದರ ನಂತರ ಅವರು ಹಾಲು ಕುಡಿಯುತ್ತಿದ್ದರು. ಒಂದು ಸಲ ರಾತ್ರಿ ಹೊತ್ತು ಅವರಿಗೆ ಹಾಲು ಕುಡಿಸಲು ಹೋಗಿದ್ದೆ. ಶ್ರೀಮಾತೆಯವರು ಹಠ ಹಿಡಿದು ಕುಳಿತರು, ''ನಾನು ಹಾಲು ಕುಡಿಯಲಾರೆ'' ಎಂದು. ಏನು ಮಾಡಿದರೂ ಅವರು ಹಾಲು ಕುಡಿಯದಿದ್ದುದನ್ನು ಕಂಡು ನಾನಂದೆ: ''ಹಾಗಿದ್ದರೆ ಮಹಾರಾಜರನ್ನು ಕರೆಯಲೆ?'' ಅದಕ್ಕೆ ಶ್ರೀಮಾತೆ, ''ನಿನ್ನ ಮಹಾರಾಜರನ್ನು ಕರೆ; ಆದರೂ ನಾನು ಕುಡಿಯಲಾರೆ'' ಎಂದರು. ಆಗ ಎಲ್ಲರೂ ಮಲಗಿಬಿಟ್ಟಿದ್ದರು. ಮಹಾರಾಜರು ತಮ್ಮ ಕೋಣೆಯಲ್ಲಿ ಒಂದು ಬದಿಯಲ್ಲಿ, ನೆಲದ ಮೇಲೆ ಹಾಸಿಗೆ ಹಾಸಿ ಮಲಗಿದ್ದರು. ನಾನು ಅವರನ್ನು ಕರೆಯಲಿಲ್ಲ. ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸುತ್ತಿದ್ದಾಗ ಅವರು ಕೇಳಿದರು, ''ಏನು, ಕರೆಯಲಿಲ್ಲವೆ?'' ಆಗ ನಾನು ಮತ್ತೆ ಹೋದೆ. ಮಹಾರಾಜರ ತಲೆಯ ಬಳಿಗೆ ಹೋಗಿ, ತುಸು ಸದ್ದು ಮಾಡಿದೆ — ಆಗ ಅವರು ದಡಬಡನೆ ಎದ್ದು ಕುಳಿತರು. ನನ್ನಿಂದ ಎಲ್ಲವನ್ನೂ ಕೇಳಿ ತಿಳಿದು, ಅವರು ಎದ್ದು ಬಂದರು. ಶ್ರೀಮಾತೆಯವರ ಬಳಿಗೆ ಹೋಗಿ, ಅವರ ತಲೆಯ ಹತ್ತಿರ ನಿಂತರು. ಶ್ರೀಮಾತೆಯವರ ಕೋಣೆಯಲ್ಲಿ ದೀಪ ಉರಿಯುತ್ತಿತ್ತು. ಹೊರಗೆ ಒಂದು ಹರಿಕೇನ್ ಲಾಟೀನು ಉರಿಯುತ್ತಿತ್ತು. ಶ್ರೀಮಾತೆ ಕೇಳಿದರು, ''ಏನು, ಶರತ್ ಬಂದನೆ?''

ನಾನಂದೆ – ''ಹೌದಮ್ಮ. ನಿಮ್ಮ ತಲೆಯ ಬಳಿಯೇ ನಿಂತಿದ್ದಾರೆ.''

ಶ್ರೀಮಾತೆ – ''ಎಲ್ಲಿ? ಬಾ ಮಗೂ. ಹತ್ತಿರ ಬಾ, ಕುಳಿತುಕೋ.''

ಹೀಗೆಂದ ಅವರು, ತಮಗೆ ತೀರ ಸಮೀಪದಲ್ಲೇ ಕುಳಿತುಕೊಳ್ಳಲು ಶರತ್ ಮಹಾರಾಜರಿಗೆ ಹೇಳಿದರು. ''ನೋಡು ಮಗೂ, ಇಂತಹ ರಾತ್ರಿಯಲ್ಲಿ ನಿನ್ನನ್ನು ಕರೆದು ಅವಳು ಎಂಥ ಕಷ್ಟ ಕೊಟ್ಟಳು!''



ಮಹಾರಾಜರು ಶ್ರೀಮಾತೆಯವರ ತಲೆಯ ಮೇಲೆ, ದೇಹದ ಮೇಲೆ ಸ್ವಲ್ಪ ಹೊತ್ತು ಕೈಯಾಡಿಸುತ್ತ, ಮೆಲ್ಲಮೆಲ್ಲನೆ ಹೇಳಿದರು, ''ಅಮ್ಮಾ, ಈಗ ಸ್ವಲ್ಪ ಹಾಲು ಕುಡಿಯುವಿರಾ?'' ಶ್ರೀಮಾತೆ, ''ಕುಡಿಯುತ್ತೇನೆ'' ಎಂದರು. ಆಗ ಶರತ್ ಮಹಾರಾಜ್ ನನಗೆ, ''ಸರಳಾ, ಹಾಗಿದ್ದರೆ ಸ್ವಲ್ಪ ಕುಡಿಸು'' ಎಂದರು.

ಶ್ರೀಮಾತೆ – ''ಇಲ್ಲ , ಅವಳು ಕುಡಿಸುವುದು ಬೇಡ. ಅವಳು ರಾತ್ರಿಹಗಲು ಬರೀ 'ಅಮ್ಮಾ ಊಟ ಮಾಡಿ', 'ಅಮ್ಮಾ ಊಟ ಮಾಡಿ' ಎಂದಷ್ಟೇ ಹೇಳುತ್ತಾಳೆ. ಅದರೊಂದಿಗೆ ಕಂಕುಳದಲ್ಲಿ ಕಡ್ಡಿ (ಥರ್ಮೋಮಿಟರ್) ಇಡುತ್ತಾಳೆ. ಇವೆರಡು ಮಾತ್ರ ಮಾಡಲು ಕಲಿತಿದ್ದಾಳೆ. ನಾನು ಅವಳ ಕೈಯಿಂದ ಕುಡಿಯಲಾರೆ. ನೀನೇ ನನಗೆ ಕುಡಿಸು.''

ಆಗ ಮಹಾರಾಜರ ಎರಡೂಕೈಗಳು ಥರಥರನೆ ನಡುಗುತ್ತಿದ್ದವು. ಹೇಗಾದರೂ ಅವರು ಕುಡಿಸಬಲ್ಲರು? ಅವರು ತುಂಬ ಅಸಹಾಯಕರಾಗಿಬಿಟ್ಟಿದ್ದರು. ಏನೇ ಆಗಲಿ, ನಾನು ಕುಡಿಸಲಾರೆ ಎಂದು ಆಗ ನಾನು ನಿರ್ಧರಿಸಿದ್ದೆ. ಮಹಾರಾಜರೇ ಕುಡಿಸಲಿ

ಎಂದು ಶ್ರೀಮಾತೆಯವರೇ ಹೇಳಿಬಿಟ್ಟಿದ್ದರು. ಅವರು ಮಹಾರಾಜರ ಎದುರಿಗೆ ಈ ರೀತಿ ಹೇಳಿದ್ದರಿಂದ ನನಗೆ ತುಂಬಾ ದುಃಖವುಂಟಾಗಿತ್ತು. ಹಾಗಿದ್ದರೂ ನಾನು ಮುಖದಲ್ಲಿ ನಗುವನ್ನು ಹೊತ್ತುಕೊಂಡಿದ್ದೆ. ಹರಿಕೇನ್ ದೀಪವನ್ನು ಹತ್ತಿರಕ್ಕೆ ತಂದು, ಫೀಡಿಂಗ್ ಕಪ್‌ನಲ್ಲಿ ಹಾಲನ್ನು ಹಿಡಿದುಕೊಟ್ಟೆ. ಮಹಾರಾಜರು ಸ್ವಲ್ಪಸ್ವಲ್ಪವಾಗಿ ಶ್ರೀಮಾತೆಯವರ ಬಾಯಿಗೆ ಹಾಲನ್ನು ಕುಡಿಸತೊಡಗಿದರು. ಅನಂತರ, ''ಅಮ್ಮಾ, ಸ್ವಲ್ಪ ಸ್ವಲ್ಪವೇ ಕುಡಿಯಿರಿ'' ಎಂದರು. ಶ್ರೀಮಾತೆ – ''ನೋಡು, ಎಷ್ಟು ಒಳ್ಳೆಯ ಮಾತು, 'ಅಮ್ಮಾ ಸ್ವಲ್ಪ ಸ್ವಲ್ಪವೇ ಕುಡಿಯಿರಿ' ಅಂತ! ಈ ರೀತಿ ಚೆನ್ನಾಗಿ ಮಾತನಾಡಲು ಅವರಿಗೆ ಗೊತ್ತಿಲ್ಲ'' ಎಂದರು. ಶ್ರೀಮಾತೆಯವರ ಊಟವಾದ ನಂತರ ಮಹಾರಾಜ್ ಅವರ ಹಾಸಿಗೆಯನ್ನು ಸರಿಪಡಿಸಿ, ಸೊಳ್ಳೆ ಪರದೆಯನ್ನು ಕಟ್ಟಿ, ''ಹಾಗಿದ್ದರೆ, ಅಮ್ಮಾ, ನಾನಿನ್ನು ಬರಲೆ?'' ಎಂದು ಕೇಳಿದರು.

ಶ್ರೀಮಾತೆ – ''ಬಾ ಮಗೂ, ಬಾ. ಅಯ್ಯೋ, ನನ್ನ ಮಗನಿಗೆ ಎಷ್ಟೊಂದು ಕಷ್ಟವಾಯಿತು! ಅವಳು ಕರೆದುಕೊಂಡು ಬಂದಳು. ಬಾ ಮಗೂ, ದುರ್ಗಾ, ದುರ್ಗಾ!''

ಮೊದಲೆಲ್ಲ ಶ್ರೀಮಾತೆಯವರು ಮಹಾರಾಜರ ಮುಂದೆ ಮುಖದ ಮೇಲೆ ಸೆರಗು ಎಳೆದುಕೊಳ್ಳುತ್ತಿದ್ದರು. ಎಂದಿಗೂ ಅವರ ಎದುರಿಗೆ ಮಾತನಾಡುತ್ತಿರಲಿಲ್ಲ. ಇದರಿಂದ ಮಹಾರಾಜರಿಗೆ ದುಃಖವುಂಟಾಗಿತ್ತು. ಅವರು ನಗುತ್ತ, ''ನಾನು ಅವರ ಮಾವನೇನೋ ಎಂಬ ಹಾಗೆ ಅವರು ವರ್ತಿಸುತ್ತಿದ್ದಾರೆ'' ಎನ್ನುತ್ತಿದ್ದರು. ಆ ದಿನಗಳಲ್ಲಿ ಸೊಸೆಯಂದಿರು ಮಾವನ ಮುಂದೆ ಮುಖ ತೋರಿಸುತ್ತಿರಲಿಲ್ಲ ; ಸೆರಗು ಎಳೆದುಕೊಂಡೇ ಅವರ ಮುಂದೆ ಓಡಾಡುತ್ತಿದ್ದರು. ಅದಕ್ಕೇ ಮಹಾರಾಜರು, ''ಶ್ರೀಮಾತೆಯವರು ನನ್ನ ಮನಸ್ಸಿನ ಈ ದುಃಖವನ್ನು ನಿವಾರಿಸಲೆಂದೇ ನನ್ನಿಂದ ಈ ರೀತಿಯಲ್ಲಿ ಸೇವೆ ಮಾಡಿಸಿಕೊಂಡರು'' ಎನ್ನುತ್ತಿದ್ದರು.

ಮರುದಿನ ನಾನು ಮಹಾರಾಜರಿಗೆ ಹೇಳಿದೆ: ''ಶ್ರೀಮಾತೆಯವರು ನನ್ನ ಮೇಲೆ ತುಸು ಕೋಪಿಸಿಕೊಂಡಂತಿದೆ. ನಾನು ಇನ್ನು ಮೇಲೆ ಅವರಿಗೆ ಹಾಲು ಕುಡಿಸುವುದಾಗಲಿ, ಥರ್ಮೋಮೀಟರ್ ಇಡುವುದಾಗಲಿ ಮಾಡಲಾರೆ. ಮರೆಯಾಗಿ ಇದ್ದುಕೊಂಡು ಎಲ್ಲವನ್ನೂ ಸ್ವಚ್ಛಗೊಳಿಸುತ್ತೇನೆ.''

ಮಹಾರಾಜ್– ''ಅನ್ನವನ್ನು ನೀನೇ ತಿನ್ನಿಸಬೇಕಲ್ಲ?''

ನಾನು – '' ಹೌದು. ಅನ್ನವನ್ನು ನಾನೇ ತಿನ್ನಿಸುತ್ತೇನೆ. ಉಳಿದದ್ದನ್ನೆಲ್ಲ ಮಾಡುತ್ತೇನೆ. ಆದರೆ ಹಾಲು ಕುಡಿಸುವುದು ಮತ್ತು ಥರ್ಮೋಮೀಟರ್ ಇಡುವುದನ್ನೂ ಬೇರೆಯಾರಾದರೂ ಮಾಡಲಿ.''

ಆ ದಿನ ಹೀಗೆ ಕಳೆಯಿತು. ಶ್ರೀಮಾತೆ ಎಲ್ಲವನ್ನೂ ಗಮನಿಸಿದರು. ಮರುದಿನ ಬೆಳಿಗ್ಗೆ ನಾನು ಉಳಿದ ಎಲ್ಲ ಕೆಲಸಗಳನ್ನೂ ಮಾಡಿದ ಬಳಿಕ 'ನವಾಸನದ ಸೊಸೆ'ಗೆ ಹೇಳಿದೆ: ''ಬಟ್ಟೆಬರೆಯೆಲ್ಲ ಕೊಳೆಯಾಗಿವೆ. ನಾನು ಬೋರ್ಡಿಂಗ್ ಮನೆಗೆ∩ ಇವನ್ನು ಕೊಟ್ಟು ಬರುತ್ತೇನೆ. ಬಂದ ಮೇಲೆ ಶ್ರೀಮಾತೆಯವರಿಗೆ ಅನ್ನ ತಿನ್ನಿಸುತ್ತೇನೆ.'' ಇತ್ತ ನಾನು ಹೋದ ಮೇಲೆ ಶ್ರೀಮಾತೆಯವರು ನವಾಸನದ ಸೊಸೆಯನ್ನು, ''ಸರಳಾ ಎಲ್ಲಿಗೆ ಹೋದಳು?'' ಎಂದು ಕೇಳಿದರು.

ನಾನು ಬೋರ್ಡಿಂಗ್ ಮನೆಗೆ ಹೋಗಿರುವ ವಿಷಯವನ್ನು ಕೇಳಿ ಅವರು ಕೇಳಿದರು: ''ಸರಳಾ ನನ್ನ ಮೇಲೆ ಕೋಪಿಸಿಕೊಂಡು ಹೊರಟುಹೋದಳೆ?''

ಸೊಸೆ: ''ಇಲ್ಲಮ್ಮಾ. ಸರಳಾ ಅಕ್ಕ ಏಕೆ ಕೋಪಮಾಡುತ್ತಾಳೆ? ಅವಳು ಬಟ್ಟೆಬರೆ ಹಾಕಿ ಬರಲು ಹೋಗಿದ್ದಾಳೆ. ಮರಳಿ ಬಂದ ಮೇಲೆ ನಿಮಗೆ ಅನ್ನ ತಿನಿಸುತ್ತಾಳೆ ಅಂತ ಹೇಳಿದ್ದಾಳೆ.''

ಶ್ರೀಮಾತೆ: ''ಇಲ್ಲ, ಅವಳು ನನ್ನ ಮೇಲೆ ಕೋಪಿಸಿಕೊಂಡು ಹೊರಟುಹೋಗಿದ್ದಾಳೆ.''

ನಾನು ಮರಳಿ ಬಂದ ನಂತರ ನವಾಸನದ ಸೊಸೆ ನನಗೆ ಎಲ್ಲವನ್ನೂ ಹೇಳಿದಳು. ನಾನು ಶ್ರೀಮಾತೆಯವರ ಕೋಣೆಗೆ ಕಾಲಿಟ್ಟ ಕೂಡಲೇ ಅವರು ನನ್ನನ್ನು ಬಳಿಗೆ ಕರೆದು ಕೇಳಿದರು, ''ಏನಮ್ಮಾ, ನೀನು ನನ್ನ ಮೇಲೆ ಕೋಪ ಮಾಡಿಕೊಂಡಿದ್ದೀಯಾ?'' ''ನಾನೇಕೆ ಕೋಪಿಸಿಕೊಳ್ಳಲಿ, ಅಮ್ಮಾ.'' ''ಹಾಗಿದ್ದರೆ ನೀನೇಕೆ ನನಗೆ ಹಾಲು ಕುಡಿಸುತ್ತಿಲ್ಲ? ಕಂಕುಳದಲ್ಲಿ ಕಡ್ಡಿಯನ್ನೇಕೆ ಇಡುತ್ತಿಲ್ಲ? ಅಮ್ಮಾ, ನಾನು ಕಾಯಿಲೆ ಅನುಭವಿಸಿ, ಅನುಭವಿಸಿ ಹೇಗಾಗಿಬಿಟ್ಟಿದ್ದೇನೆ ಎಂದರೆ, ಯಾವಾಗ ಏನು ಹೇಳುತ್ತೇನೆ ಎನ್ನುವುದೇ ಸರಿಯಾಗಿ ತಿಳಿಯುತ್ತಿಲ್ಲ. ನನ್ನ ಮಾತಿಗೆ ಕೋಪಿಸಿಕೊಳ್ಳಬೇಡ, ಅಮ್ಮಾ''– ಹೀಗೆಂದು ಶ್ರೀಮಾತೆ ನನ್ನ ತಲೆಯನ್ನು ತಮ್ಮ ಎದೆಗೆ ಒರಗಿಸಿಕೊಂಡು ಪ್ರೀತಿಯನ್ನು ತೋರ್ಪಡಿಸಿದರು. ಆಗ ನಾನು ಚೆನ್ನಾಗಿ ಅತ್ತುಬಿಟ್ಟೆ.

ಶ್ರೀಮಾತೆಯವರು ಇನ್ನು ಹೆಚ್ಚು ದಿನ ಉಳಿಯಲಾರರು ಎಂಬುದು ನಮಗೆಲ್ಲ ತಿಳಿದಿತ್ತು. ಗೋಲಾಪ್-ಮಾ, ಯೋಗಿನ್-ಮಾ ಕಣ್ಣೀರು ಸುರಿಸಿ ಹೇಳುತ್ತಿದ್ದರು, ''ಶಾಂತಿ, ಸ್ವಸ್ತ್ಯಯನ ಎಲ್ಲವನ್ನೂ ಮಾಡಿದ್ದಾಯಿತು, ಅಮ್ಮಾ. ಅದರಿಂದೇನೂ ಕಡಿಮೆಯಾಗಿಲ್ಲ. ಆದರೆ ಯಾವುದರಿಂದಲೂ ಉಪಯೋಗವಾಗಿಲ್ಲ.'' ಚಿಂತೆ ಮಾಡುತ್ತ ಮಾಡುತ್ತ ಗೋಲಾಪ್-ಮಾ ಅವರ ಎದೆನೋವು ಹೆಚ್ಚಾಯಿತು. ಶ್ರೀಮಾತೆಯವರು ಒಂದು ದಿನ ಮಹಾರಾಜರನ್ನು ಕರೆದು ಹೇಳಿದರು, ''ಶರತ್, ಗೋಲಾಪ್, ಯೋಗಿನ್ ಹಾಗೂ ಇವರೆಲ್ಲರೂ ಉಳಿದುಕೊಂಡಿದ್ದಾರೆ. ಅವರನ್ನೆಲ್ಲ ನೋಡಿಕೋ.''

ಕೊನೆಯ ದಿನಗಳಲ್ಲಿ ಒಂದು ದಿನ ಹರಿಪ್ರೇಮ ಮಹಾರಾಜ್ (ಸ್ವಾಮಿ ಹರಿಪ್ರೇಮಾನಂದ) ಶ್ರೀಮಾತೆಯವರಿಗೆ ಜಯ

∩ ಸೋದರಿ ನಿವೇದಿತಾಳ ಶಾಲೆ. *(–ಸಂ)*

ರಾಮಬಾಟಿಯಿಂದ ಹೊಸ ಬಾವಿಯ ನೀರನ್ನು ತಂದಿದ್ದರು. ಆ ನೀರನ್ನು ಶ್ರೀಮಾತೆಯವರ ಬಾಯಿಗೆ ತುಸು ನೀಡಲಾಯಿತು. ಹರಿಪ್ರೇಮ ಮಹಾರಾಜ್ ಹೇಳಿದರು, ''ಅಮ್ಮಾ, ಕಿಶೋರಿ ಅಣ್ಣ ನಿಮ್ಮ ಕೋಣೆಯ ನೆಲವನ್ನೆಲ್ಲ ಸಿಮೆಂಟ್ ಹಾಕಿ ದುರಸ್ತಿ ಮಾಡಿದ್ದಾನೆ. ಆಮೇಲೆ ನೀವು ಊರಿಗೆ ಬಂದಾಗ ಸ್ವಲ್ಪವೂ ಕಷ್ಟವಾಗದು.'' ಶ್ರೀಮಾತೆ ಹೇಳಿದರು, ''ಕಿಶೋರಿ (ಸ್ವಾಮಿ ಪರಮೇಶ್ವರಾನಂದ) ಯಾಕೆ ಮಣ್ಣನ್ನು ತೆಗೆದು, ಸಿಮೆಂಟ್ ಹಾಕಲು ಹೋದ? ಮಣ್ಣಿನ ನೆಲವೇ ಚೆನ್ನಾಗಿತ್ತು. ಇದನ್ನೆಲ್ಲ ಮಾಡಿಸುವ ಅಗತ್ಯವಾದರೂ ಏನಿತ್ತು? ನಾನು ಇನ್ನು ಮೇಲೆ ಅಲ್ಲಿಗೆ ಹೋಗುತ್ತೇನೆ ಅಂತ ಕಿಶೋರಿ ಯಾಕೆ ಆಲೋಚಿಸಿದ? ನಾನು ಇನ್ನು ಅಲ್ಲಿಗೆ ಹೋಗುವುದಿಲ್ಲ''

ಶ್ರೀಮಾತೆಯವರು ದೇಹತ್ಯಾಗ ಮಾಡುವುದಕ್ಕೆ ಹಿಂದಿನ ದಿನ ಬೆಳಗ್ಗಿನಿಂದಲೇ ಅವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡಿತ್ತು. ಅದಕ್ಕೂ ಹಿಂದಿನ ದಿನದಿಂದ ನನಗೆ ಹೊಟ್ಟೆನೋವು ಉಂಟಾದದ್ದರಿಂದ ದೇಹ ದುರ್ಬಲವಾಗಿ, ಅಲುಗಾಡಲೂ ಸಾಧ್ಯವಾಗುತ್ತಿರಲಿಲ್ಲ. ಮಹಾರಾಜ್ ನನಗೆ ಶ್ರೀಮಾತೆಯವರ ಕೋಣೆಯಲ್ಲಿ ಕುಳಿತು ಊಟ ಮಾಡಲು ಹೇಳಿದರು. ಅತ್ತ ಶ್ರೀಮಾತೆಯವರಿಗೆ ಉಸಿರಾಟ ಕಷ್ಟವಾಗುತ್ತಿದೆ; ಅದೆಂಥ ಸಂಕಟವೆಂದರೆ ಅದನ್ನು ಕಣ್ಣಿನಿಂದ ನೋಡಲಾಗುತ್ತಿರಲಿಲ್ಲ. ಮೊದಲನೇ ಅಂತಸ್ತಿನಿಂದ ಮೂರನೇ ಅಂತಸ್ತಿನವರೆಗೂ – ಮನೆಯೆಲ್ಲ ಆ ಸದ್ದು ಕೇಳಿಸುತ್ತಿತ್ತು. ಕಣ್ಣುಗಳೆರಡೂ ಹೊರಬರುವಂತಿದ್ದವು. ಶ್ರೀಮಾತೆಯವರು ಮಾತ್ರ ಯಾವುದೇ ರೀತಿಯಲ್ಲಿ ಹಟ ಮಾಡುತ್ತಿರಲಿಲ್ಲ. ಎಷ್ಟೊಂದು ಮಂದಿ ಪಾಪಿ-ಪೀಡಿತರನ್ನು ತಮ್ಮ ಬಳಿಗೆ ಸೆಳೆದುಕೊಂಡಿದ್ದರೆಂದರೆ, ಅದರಿಂದಲೇ ಇಷ್ಟೊಂದು ಕಷ್ಟವುಂಟಾಗಿತ್ತು! 'ಉದ್ಬೋಧನ' ಮನೆಯೆಲ್ಲ ಸಾಧು-ಭಕ್ತರಿಂದ ತುಂಬಿಹೋಯಿತು. ರಾತ್ರಿಯಿಡೀ ನಾನು ಮತ್ತು ಸುಧೀರಾ ಅಕ್ಕ ಶ್ರೀಮಾತೆಯವರ ಪಾದಗಳ ಬಳಿ ಕುಳಿತಿದ್ದೆವು. ಶ್ರೀಮಾತೆಯವರ ಪಾದಗಳ ಹೆಬ್ಬೆಟ್ಟುಗಳನ್ನು ಒಂದು ಪಾತ್ರೆಯಲ್ಲಿ ಮುಳುಗಿಸಿ, ಚರಣಾಮೃತ ಮಾಡಿಕೊಡಲು ಯೋಗಿನ್-ಮಾ ನನಗೆ ಹೇಳಿದರು. ಶ್ರೀಮಾತೆಯವರ ಉಸಿರಾಟದೊಂದಿಗೆ, ಅವರ ಮುಖದ ಮೇಲೆ ಗಂಗಾಜಲವನ್ನು ಹನಿಹನಿಯಾಗಿ ಚಿಮುಕಿಸತೊಡಗಿದೆ. ಕ್ರಮೇಣ ಸದ್ದು ಕಡಿಮೆಯಾಗುತ್ತ ಬಂತು. ಕೊನೆಗೆ ಎಲ್ಲವೂ ಶಾಂತವಾಯಿತು. ಆಗ ರಾತ್ರಿ ಒಂದು ಗಂಟೆಯಾಗಿತ್ತು. ಅಂದು ಅದು ಶ್ರಾವಣಮಾಸದ ನಾಲ್ಕನೇ ದಿನ.

ಆಗ ಶ್ರೀಮಾತೆಯವರ ಮುಖವನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಈಗ ಅದೇ ಶ್ರೀಮಾತೆಯವರ ಮುಖ ಸ್ಥಿರವಾಗಿ ನಿಲ್ಲುತ್ತಿರಲಿಲ್ಲ – ಒಂದೇ ಸವನೆ ದುರ್ಗಾ ಮಾತೆಯ ಪ್ರತಿಮೆಯಂತಿತ್ತು!

ಶ್ರೀಮಾತೆಯವರನ್ನು ತೆಳ್ಳನೆಯ ಕೆಂಪಂಚಿನ ರೇಷ್ಮೆ ಬಟ್ಟೆಯಿಂದ ಹೊದಿಸಲಾಯಿತು. ಮರುದಿನ ಹನ್ನೊಂದು ಗಂಟೆಯ ಹೊತ್ತಿಗೆ ಶ್ರೀಮಾತೆಯವರ ಮಂಚವನ್ನು ತಲೆಯಲ್ಲಿ ಹೊತ್ತು ಕಾಶೀಪುರದ ಮೂಲಕ ಬಾರಾನಗರದ ಕುಟಿಘಾಟ್‌ಗೆ ತರಲಾಯಿತು. ಗೋಲಾಪ್-ಮಾ, ಯೋಗಿನ್-ಮಾ ಇಬ್ಬರೂ ನನ್ನನ್ನು ಅವರೊಂದಿಗೆ ಹೋಗುವುದನ್ನು ತಡೆದರು. ''ಅಲ್ಲಿಗೆ ಏನು ನೋಡಲು ಹೋಗುತ್ತೀಯೆ?'' ಎಂದರು. ಸುಧೀರಾ ಅಕ್ಕ ಬಲವಂತವಾಗಿ ನನ್ನ ಕೈ ಹಿಡಿದು ಅವರಿಂದ ಪ್ರತ್ಯೇಕಿಸಿ ನನ್ನನ್ನು ಕರೆದುಕೊಂಡು ಹೋದಳು. ಆಗ ಜೋರಾಗಿ ಭಗವಂತನ ನಾಮ, ಹರಿಸಂಕೀರ್ತನೆ ನಡೆಯುತ್ತಿತ್ತು. ಆಗ ನನಗೆ ಯಾವುದೂ ಗಮನಕ್ಕೆ ಬರುತ್ತಿರಲಿಲ್ಲ. ಅವರೊಂದಿಗೆ ನಾನು ಕುಟಿಘಾಟ್‌ವರೆಗೂ ಹೋದೆ. ಅಲ್ಲಿಂದ ಮಹಾರಾಜರುಗಳು ಹಾಗೂ ಭಕ್ತರುಗಳು ಶ್ರೀಮಾತೆಯವರ ದೇಹದೊಂದಿಗೆ ಒಂದು ದೊಡ್ಡ ದೋಣಿಯಲ್ಲಿ ಹೋದರು. ನಾವು ಹೆಣ್ಣುಮಕ್ಕಳೆಲ್ಲ ಪಕ್ಕದಲ್ಲೇ ಸಣ್ಣ ಒಂದು ದೋಣಿಯಲ್ಲಿ ಹೋದೆವು. ಎರಡು ಗಂಟೆಯ ಹೊತ್ತಿಗೆ ಬೇಲೂರು ಘಾಟ್ ತಲುಪಿ, ಶ್ರೀಮಾತೆಯವರನ್ನು ನೆಲ್ಲಿ ಮರದಡಿಗೆ ಕರೆದುಕೊಂಡು ಹೋದರು. ಬಳಿಕ ಅಲ್ಲಿ ಪೂಜೆ, ನೈವೇದ್ಯಗಳನ್ನು ಮಾಡಿದರು. ಅನಂತರ ಗಂಗಾಘಾಟ್‌ನಲ್ಲಿ ಶ್ರೀಮಾತೆಯವರಿಗೆ ಸ್ನಾನ ಮಾಡಿಸುವರು. ಬಟ್ಟೆಯನ್ನು ಕಟ್ಟಿ ಮರೆ ಮಾಡಿದ್ದಾಯಿತು. ನಾನು ಹಾಗೂ ಸುಧೀರಾ ಅಕ್ಕ ಶ್ರೀಮಾತೆಯವರ ದೇಹವನ್ನು ಎತ್ತಿಕೊಂಡು ಗಂಗಾನದಿಯ ನೀರಿನಲ್ಲಿ ಮುಳುಗಿಸಿ ಸ್ನಾನ ಮಾಡಿಸಿದೆವು. ಕೊನೆಯ ದಿನಗಳಲ್ಲಿ ಶ್ರೀಮಾತೆಯವರಿಗೆ ದೇಹದ ಉರಿ ಹೆಚ್ಚಾದಾಗ ಅವರು, ''ನನ್ನನ್ನು ಗಂಗೆಯ ಕಡೆಗೆ ಕರೆದುಕೊಂಡು ಹೋಗು, ಗಂಗೆಯ ಕಡೆಗೆ ಕರೆದೊಯ್ಯು'' ಎನ್ನುತ್ತಿದ್ದರು. ಶ್ರೀಮಾತೆಯವರ ದೇಹ ಆಗ ಎಷ್ಟೊಂದು ತೆಳ್ಳಗಾಗಿತ್ತು, ಹಗುರವಾಗಿತ್ತು! ಅವರ ಬಟ್ಟೆಗಳನ್ನು ಬದಲಾಯಿಸಿ, ಬೇರೆ ಹೊಸ ತೆಳ್ಳನೆಯ-ಕೆಂಪಂಚಿನ ರೇಷ್ಮೆ ಬಟ್ಟೆಯನ್ನು ತೊಡಿಸಲಾಯಿತು. ಈಗ ಸಾಧುಗಳು ಮತ್ತೆ ಶ್ರೀಮಾತೆಯವರ ದೇಹವನ್ನು ನೆಲ್ಲಿ ಮರದಡಿಗೆ ತೆಗೆದುಕೊಂಡು ಹೋದರು. ಅಲ್ಲಿ ಎರಡನೇ ಬಾರಿ ಅವರಿಗೆ ಆರತಿ ಮಾಡಿದರು. ನಾನು ಎಲ್ಲವನ್ನೂ ನೋಡಿದೆ; ಆದರೆ ನನ್ನ ಮನಸ್ಸಿನಲ್ಲಿ ಯಾವುದೂ ಗಮನಕ್ಕೆ ಬರಲಿಲ್ಲ. ಬಳಿಕ, ಈಗ ಶ್ರೀಮಾತೆಯವರ ದೇವಾಲಯವಿರುವಲ್ಲಿ ಅವರ ಚಿತೆಯನ್ನು ಸಿದ್ಧಪಡಿಸಲಾಯಿತು. ನನಗೆ ಆ ದೃಶ್ಯವನ್ನು ನೋಡಲಾಗುತ್ತಿರಲಿಲ್ಲ. ನಾನೇನು ನೋಡಬಲ್ಲೆ? ನಾನು ಸುಧೀರಾ ಅಕ್ಕನ ಹಿಂಭಾಗದಲ್ಲಿ ಮಲಗಿಬಿಟ್ಟೆ. ಶ್ರೀಗಂಧದ ಕಟ್ಟಿಗೆಯಿಂದ ಮಾಡಿದ ಚಿತೆಯ ಮೇಲೆ ಶ್ರೀಮಾತೆಯವರ ದೇಹವನ್ನು ಮಲಗಿಸಿ, ಶರತ್ ಮಹಾರಾಜ್ ಹಾಗೂ ಇತರ ಮಹಾರಾಜರುಗಳು ಬಿಲ್ವ, ಧುನಿ ಹಾಗೂ ಧೂಪ ಇವುಗಳೊಂದಿಗೆ ಪ್ರದಕ್ಷಿಣೆ ಮಾಡುತ್ತಾ ಆಹುತಿ ನೀಡತೊಡಗಿದರು. ಪ್ರಬೋಧ-ಅಕ್ಕ ಬಲವಂತವಾಗಿ ನಮ್ಮ ಕೈಹಿಡಿದೆಳೆದು ಹೇಳಿದಳು: ''ಒಂದು ಸಲ ನೋಡು – ಎಷ್ಟು ಚೆನ್ನಾಗಿ ಕಾಣಿಸುತ್ತಿದೆ!'' ನೋಡಿದೆ, ಅಗ್ನಿಯ ಜ್ವಾಲೆ

ಆಕಾಶವನ್ನು ಸ್ಪರ್ಶಿಸುವಂತೆ ನೆಗೆದುಬಿಟ್ಟಿತ್ತು! ಆಗಲಂತೂ ಈಗಿನಂತೆ ಟ್ರಾಮ್- ಬಸ್ಸುಗಳ ಸೌಲಭ್ಯವಿರಲಿಲ್ಲ. ಆದ್ದರಿಂದ ಹೆಚ್ಚಾಗಿ ಜನರು ಬಂದು ಸೇರಿರಲಿಲ್ಲ. ಧಗಧಗನೆ ಬೆಂಕಿ ಉರಿಯುತ್ತಿತ್ತು. ಗಂಗೆಯ ಇನ್ನೊಂದು ದಡದಲ್ಲಿ ಜೋರಾಗಿ ಮಳೆ ಸುರಿಯುತ್ತಿತ್ತು. ಈ ದಡದಲ್ಲಿ ಮಳೆಯಿರಲಿಲ್ಲ.

ಶ್ರೀಮಾತೆಯವರ ದೇಹದ ಮೇಲೆ ನಾನು ಕಣ್ಣು ಹಾಯಿಸಲಿಲ್ಲ. ಏನು ನೋಡಲಿ, ಎಂದು ಭಾವಿಸುತ್ತ ಪ್ರತಿಕ್ಷಣವೂ ಅತ್ತ ದೃಷ್ಟಿ ಹರಿಸಲಿಲ್ಲ. ಈಗ ನಾವೂ ಪ್ರದಕ್ಷಿಣೆ ಮಾಡಿ ಮೂರು ಬಾರಿ ಆಹುತಿ ನೀಡಿದೆವು.

ಅಂದು ಮರಳಿ ಬಂದ ನಂತರ ಸುಧೀರಾ ಅಕ್ಕ ನನ್ನನ್ನು ಬೋರ್ಡಿಂಗ್‌ಗೆ ಕರೆದುಕೊಂಡು ಹೋದಳು. ನಾನು ಅಲ್ಲೇ ಇರತೊಡಗಿದೆ. ಎರಡು-ಮೂರು ದಿನ 'ಉದ್ಬೋಧನ'ಕ್ಕೆ ಹೋಗಲಿಲ್ಲ. ಮನಸ್ಸು ಒಪ್ಪುತ್ತಿರಲಿಲ್ಲ. ಖಾಲಿ ಮನೆ, ಅಲ್ಲಿ ಏನನ್ನು ನೋಡಲು ಹೋಗಬೇಕು? ಯೋಗಿನ್-ಮಾ ಕರೆ ಕಳುಹಿಸಿದರು. ಶ್ರೀಮಾತೆಯವರ ಕೋಣೆ ಆಗ ಖಾಲಿಯಾಗಿಯೇ ಇತ್ತು. ನಾನು ಅತ್ತ ನೋಡಲು ಹೋಗಿಲ್ಲ - ಸುಮ್ಮನೆ ಅತ್ತ ನೋಡಿದರೆ ಕಣ್ಣುಗಳಲ್ಲಿ ನೀರು ಬರುತ್ತಿದೆ. ಯೋಗಿನ್-ಮಾ ಅಳುತ್ತ ಹೇಳುತ್ತಿದ್ದಾರೆ: ''ನೀವೂ ಬಾರದಿದ್ದರೆ, ನಾವು ಹೇಗೆ ಇರಬೇಕು ಹೇಳು? ಶ್ರೀಮಾತೆ ಹೊರಟುಹೋಗಿಬಿಟ್ಟರು. ಎಲ್ಲವೂ ಶೂನ್ಯವಾಗಿಬಿಟ್ಟಿದೆ.''

ನಳಿನಿ-ಅಕ್ಕ, ಮಾಕು ಎಲ್ಲರೂ ಮರುದಿನವೇ ಜಯರಾಮಬಾಟಿಗೆ ಹೊರಟು ಹೋಗುವರು ಎಂಬುದಾಗಿ ಕೇಳಿದೆ. ಅವರೆಲ್ಲ ಅಳುತ್ತಿದ್ದರು. ಅವರು ಹೇಳುತ್ತಿದ್ದರು, ''ಸರಳಾ ಅಕ್ಕ, ನಾವು ಹೋಗುತ್ತಿದ್ದೇವೆ. ಇನ್ನೂ ಯಾವಾಗ ನೋಡುತ್ತೇವೋ, ಯಾರಿಗೆ ಗೊತ್ತು?'' ಅಂದು ಮಹಾರಾಜರ ಭೇಟಿಯಾಗಲಿಲ್ಲ. ಅನಂತರ ನಡುನಡುವೆ ಅಲ್ಲಿಗೆ ಹೋಗುತ್ತಿದ್ದೆ. ಹದಿಮೂರನೇ ದಿನ ಅಲ್ಲಿ ಭಂಡಾರ(ವಿಶೇಷ ಭೋಜನ)ವಿತ್ತು. ಬೇಲೂರು ಮಠದಲ್ಲೂ ಭಂಡಾರವಿತ್ತು - ಅಲ್ಲಿ ಗಂಡಸರಿಗಾಗಿ; 'ಉದ್ಬೋಧನ'ದಲ್ಲಿ ಹೆಂಗಸರಿಗಾಗಿ. ಇತ್ತ 'ಉದ್ಬೋಧನ'ದಲ್ಲಿ ಶರತ್ ಮಹಾರಾಜರು ಎಲ್ಲದರ ಜವಾಬ್ದಾರಿ ವಹಿಸಿಕೊಂಡರು. ಅಂದೇ ಶ್ರೀಮಾತೆಯವರ ಕೋಣೆಯಲ್ಲಿ ಅವರ ಭಾವಚಿತ್ರವನ್ನು ಇರಿಸಲಾಯಿತು. ಆ ಚಿತ್ರವೇ ಅಲ್ಲಿ ಇಂದಿಗೂ ಇದೆ. ಶ್ರೀಮಾತೆಯವರು ಅಲ್ಲಿ ವಾಸವಾಗಿದ್ದಾಗ ಅದನ್ನು ಗೋಡೆಯಲ್ಲಿ ತಗುಲಿಸಿ ಹಾಕಲಾಗಿತ್ತು.[೨] ರಾಸಬಿಹಾರಿ ಮಹಾರಾಜ್ ಅದನ್ನು ಕೆಳಕ್ಕಿಳಿಸಿ ಹೇಳಿದರು, ''ಶ್ರೀಮಾತೆಯವರ ಈ ಭಾವಚಿತ್ರವನ್ನೇ ಇಲ್ಲಿ ಸ್ಥಾಪಿಸೋಣ.'' ಅದಕ್ಕೆ ಶರತ್ ಮಹಾರಾಜರು ಏನೂ ಅಡ್ಡಿಪಡಿಸಲಿಲ್ಲ. ಅವರೆಂದರು, ''ರಾಸಬಿಹಾರಿ ಶ್ರೀಮಾತೆಯವರಿಗೆ ತುಂಬಾ ಸೇವೆ ಮಾಡಿದ್ದಾನೆ. ಅವನು ಹಠ ಮಾಡಿದರೆ, ಅದು ಒಳ್ಳೆಯದೇ, ಅದೇ ಚಿತ್ರವನ್ನು ಸ್ಥಾಪಿಸೋಣ.'' ಅಂದಿನಿಂದಲೇ ಶ್ರೀಮಾತೆಯವರ ನಿತ್ಯಪೂಜೆ, ನೈವೇದ್ಯ ಅಲ್ಲಿ ಆರಂಭವಾಯಿತು. ಅಂದು ಅಲ್ಲಿ ದುರ್ಗಾಸಪ್ತಶತೀ ಪಾರಾಯಣ ನಡೆಯಿತು. ಭಕ್ತರಿಗೆಲ್ಲ ಚೆನ್ನಾಗಿ ಪ್ರಸಾದ ವಿತರಣೆ ಕೂಡ ನಡೆಯಿತು.

---

೨ ಕೆಲವು ದಿನಗಳ ಹಿಂದೆ ಈ ಭಾವಚಿತ್ರದ ಫ್ರೇಂ ತೆಗೆದಾಗ, ಅದರ ಹಿಂದೆ '೧೯೧೦' ಎಂದು ಬರೆದಿತ್ತು. ಫೋಟೋ ಮುದ್ರಿಸಿದ ವರ್ಷ ಅದಾಗಿತ್ತು. *(-ಸಂ)*

## ನಾಮಜಪ - ಬ್ರಹ್ಮಚೈತನ್ಯ ಗೋಂದಾವಲೇಕರ ಮಹಾರಾಜರೊಂದಿಗೆ ಪ್ರಶ್ನೋತ್ತರ

**ಪ್ರಶ್ನೆ :** ನಾವು ತೆಗೆದುಕೊಳ್ಳುವ ನಾಮವು ಭಗವಂತನನ್ನು ತಲುಪುತ್ತದೆಯೆ ?

**ಮಹಾರಾಜ್ :** ನಾವು ಯಾವುದೇ ವ್ಯಕ್ತಿಯ ಹಿಂದಿನಿಂದ ನಡೆಯುತ್ತಿರುವಾಗ ನಮ್ಮ ಬಾಯಿಯಿಂದ ಸಹಜವಾಗಿ ಆ ವ್ಯಕ್ತಿಯ ಹೆಸರು ಉಚ್ಚಾರವಾದರೆ ಅವನು ಕೂಡಲೇ ಹಿಂದೆ ತಿರುಗಿ ನೋಡುತ್ತಾನೆ. ಮನುಷ್ಯರ ವಿಷಯದಲ್ಲಿಯೇ ಹೀಗಿರುವಾಗ, ಭಗವಂತನ ನಾಮವು ಅವನನ್ನು ತಲುಪುವುದಿಲ್ಲವೆಂದು ಹೇಗೆ ಹೇಳುವುದು ? ನಿಜವಾಗಿ ಹೇಳಬೇಕೆಂದರೆ ಭಗವಂತನ ನಾಮವು ಅವನ ಕೃಪೆಯಿಂದಲೇ ನಮ್ಮ ಬಾಯಲ್ಲಿ ಉಚ್ಚಾರವಾಗುವುದು. ಆದ್ದರಿಂದ ಅವನ ನಾಮವನ್ನು ಅವನೇ ತೆಗೆದುಕೊಳ್ಳುತ್ತಿರುತ್ತಾನೆಂದು ತಿಳಿಯಬೇಕು. ಅಂದ ಮೇಲೆ ಅವನ ನಾಮವು ಅವನನ್ನು ಮುಟ್ಟುತ್ತದೆಯೋ ಅಥವಾ ಇಲ್ಲವೋ ಎಂಬ ಶಂಕೆಗೆ ಅವಕಾಶವೇ ಇಲ್ಲ.

**ಪ್ರಶ್ನೆ :** ನಾಮದ ಅರ್ಥ ತಿಳಿದಿರುವುದಿಲ್ಲ, ಆದರೂ ನಾಮವನ್ನು ತೆಗೆದುಕೊಳ್ಳಬೇಕೆ ?

**ಮಹಾರಾಜ್ :** ನಮಗೆ ನಾಮದ ಅರ್ಥ ತಿಳಿದಿರದಿದ್ದರೂ ನಾವು ನಾಮಸ್ಮರಣೆ ಮಾಡುತ್ತಿರುತ್ತೇವೆ ಎಂಬುದು ಭಗವಂತನಿಗೆ ತಿಳಿಯುತ್ತದೆ. ಆದ್ದರಿಂದ ನಾಮದ ಅರ್ಥ ಹಾಗೂ ಮಹತ್ವ ತಿಳಿದಿರಲಿ ಅಥವಾ ತಿಳಿಯದೇ ಇರಲಿ, ನಾಮವನ್ನು ಮಾತ್ರ ತೆಗೆದುಕೊಳ್ಳಬೇಕು.

**ಪ್ರಶ್ನೆ :** ನಿಜವಾದ ನಾಮಸ್ಮರಣೆ ಯಾವುದು ?

**ಮಹಾರಾಜ್ :** ಎಲ್ಲಿಯವರೆಗೆ ನಮ್ಮ ಜೀವನದಲ್ಲಿ ಭಗವಂತನ ಹೊರತಾಗಿ ಏನೂ ನಡೆಯುವುದಿಲ್ಲ ಎಂದು ಅನಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ನಾಮಸ್ಮರಣೆಯು ನಿಜವಾದ ನಾಮಸ್ಮರಣೆ ಅಲ್ಲ. ಭಗವಂತನೇ ನಮ್ಮ ಜೀವನಕ್ಕೆ ಆಧಾರ, ಅವನ ಹೊರತಾಗಿ ನಾವು ಬದುಕಲು ಶಕ್ಯವಿಲ್ಲ ಎಂಬ ವೃತ್ತಿ ಉಂಟಾದಾಗ ಆಗುವ ನಾಮಸ್ಮರಣೆಯೇ ನಿಜವಾದ ನಾಮಸ್ಮರಣೆ.

*'ಅಮೃತವಾಣಿ' ಪುಸ್ತಕದಿಂದ*